<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 07.03.2024
ಮು. ಪಾಟಿ ಸವಾಲು : ವಾದಿ ಪರ ಶ್ರೀ ಕೆ.ಕೆ.ಎಲ್ ವಕೀಲರಿಂದ

ನನ್ನ ತಾಯಿ ಮೃತರಾದಾಗ ಅವರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ನನ್ನ ತಾಯಿ ಮೃತರಾಗುವ 5-6 ವರ್ಷಗಳ ಹಿಂದೆ ಅವರಿಗೆ ಮಧುಮೇಹ ಖಾಯಿಲೆ ಇತ್ತು. ನನ್ನ ತಾಯಿ ಮೃತರಾಗುವ 25 ವರ್ಷ ಪೂರ್ವದಿಂದಲೂ ಕೂಡ ಅವರಿಗೆ ಮಧುಮೇಹ ಹಾಗೂ ಬಿಪಿ ಖಾಯಿಲೆ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ಮಧುಮೇಹ ಹಾಗೂ ಬಿಪಿ ಖಾಯಿಲೆ ಇದ್ದ ಕಾರಣ ಅವರಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ಹಾಗೂ ಅವರಿಗೆ ಯೋಚನಾ ಶಕ್ತಿ ಅಷ್ಟಾಗಿ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಮೃತರಾದ ನಂತರ ಅವರು ಇಟ್ಟಿದ್ದ ಪೇಪರ್ ಗಳನ್ನು ತೆಗೆದಾಗ ನಿಡಿ.25 ದಾಖಲೆ ನೋಂದಣಿಯಾಗಿದ್ದ ಬಗ್ಗೆ ನನಗೆ ಗೊತ್ತಾಯಿತು. ನಿಡಿ.25 ಯಾರು ತಯಾರಿಸಿದರು ಮತ್ತು ಅದರಲ್ಲಿ ಏನೆಲ್ಲಾ ಬರೆದಿದೆ ಹಾಗೂ ಸದರಿ ದಾಖಲೆಗೆ ಯಾರೆಲ್ಲಾ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ ಎನ್ನುವುದನ್ನು ತಿಳಿದುಕೊಂಡಿದ್ದೇನೆ. ನಿಡಿ.25 ದಾಖಲೆಯನ್ನು ತಯಾರಿಸಿದವರನ್ನು ಹಾಗೂ ಅದರಲ್ಲಿ ಸಾಕ್ಷಿಗಳಾಗಿ ಸಹಿ ಮಾಡಿರುವ ವ್ಯಕ್ತಿಗಳನ್ನು ನಾನು ಖುದ್ದು ಭೇಟಿ ಮಾಡಿ ನಿಡಿ.25 ದಾಖಲೆ ಬಗ್ಗೆ ವಿಚಾರಿಸಿಲ್ಲ.

ನನ್ನ ತಾಯಿ ಬದುಕಿದ್ದ ಕಾಲದಲ್ಲಿ ನನ್ನ ಅಕ್ಕ ತಂಗಿಯರು ನಮ್ಮ ಮನೆಗೆ ಹಬ್ಬ ಹರಿದಿನಗಳಲ್ಲಿ ಬಂದು ಇರುವುದನ್ನು ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿಗೆ ಗಂಡು ಮಕ್ಕಳ ಬಗ್ಗೆ ಎಷ್ಟು ಪ್ರೀತಿ ಇತ್ತೋ ಅಷ್ಟೇ ಪ್ರೀತಿ ಹೆಣ್ಣು ಮಕ್ಕಳ ಬಗ್ಗೆ ಇತ್ತು ಎಂದರೆ ನನಗೆ ಗೊತ್ತಿಲ್ಲ. 2005 ಸಾಲಿನಲ್ಲಿ ಹೆಣ್ಣು ಮಕ್ಕಳಿಗೆ ಕೂಡ ಆಸ್ತಿಯಲ್ಲಿ ಸಮಾನಾದ ಹಿಸ್ಸಾ ಹಕ್ಕು ಇದೆ ಎಂದು ಕಾನೂನು ಬಂದ ಕಾರಣ ಹೇಗಾದರೂ ಮಾಡಿ ನನ್ನ ಸಹೋದರಿಯರಿಗೆ ಕುಟುಂಬದ ಸ್ವತ್ತುಗಳಲ್ಲಿ ಸಮನಾದ ಹಿಸ್ಸೆ ಬರುವುದನ್ನು ತಡೆಯಲು ನಿಡಿ.25 ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸುಳ್ಳು. ನಿಡಿ.25 ದಾಖಲೆಯನ್ನು ನನ್ನ ತಾಯಿಯ ಅರಿವಿಗೆ ಬಾರದಂತೆ ಪತ್ರ ಬರಹಗಾರರ ಹಾಗೂ ನಿಡಿ.25 ರಲ್ಲಿ ತೋರಿಸಿರುವ ಸಾಕ್ಷಿಗಳ ಜೊತೆ ಷರೀಕ್ಕಾಗಿ ಸದರಿ ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸುಳ್ಳು. ನಿಡಿ.25 ದಾಖಲೆ ನನ್ನ ತಾಯಿ ಸ್ವಇಚ್ಛೆಯಿಂದ ಮಾಡಿಲ್ಲ ಎಂದರೆ ಸರಿಯಲ್ಲ.

**ಮು. ಪಾಟಿ ಸವಾಲು :  3 ಮತ್ತು 4ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ಎಸ್ ವಕೀಲರಿಂದ**

ದಾವಾ ಸ್ವತ್ತುಗಳಲ್ಲಿ 3 ಮತ್ತು 4ನೇ ಪ್ರತಿವಾದಿಯವರಿಗೆ ಹಿಸ್ಸೆಯನ್ನು ತಪ್ಪಿಸುವ ಸಲುವಾಗಿ ನಾನು ಮತ್ತು 2ನೇ ಪ್ರತಿವಾದಿ ಸೇರಿ ನಿಡಿ.25 ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.